6.5.5

DOC-5

# NEWSPAPER ARTICLES
# Published by staff members



Local, Fearless, Empowering you

Daily Dispatch


Thousands of WSU degrees may not be valid

Shade, Sea, Spray

## JSS INSTITUTE OF EDUCATION

Kowdalli, Sakaleshpur Tq, Hassan Dist – 573 134

# ಮಕ್ಕಳಿಗೆ ಆಟವೇಕೆ ಅವಶ್ಯಕ...?



''ಬೆಳೆಯುವ ಸಿರಿ ಮೊಳಕೆಯಲ್ಲಿ'' ಎನ್ನುವ ಹಾಗೆ ಹುಟ್ಟಿದ ಮಕ್ಕಳು ದೇಶದ ಸಂಪತ್ತು. ಅವರು ಈ ಶತಮಾನದ ದಿಟ್ಟ ಪ್ರಜೆಗಳಾಗಬೇಕು. ಅಂತಹ ತಳಹದಿಯನ್ನು ನಮ್ಮ ಪರಿಸರ, ಪೋಷಕರಾದ ನಾವು, ಸಮಾಜ ಮತ್ತು ನಮ್ಮ ಶಿಕ್ಷಣದ ಪಠ್ಯಕ್ರಮವು ಒದಗಿಸಬೇಕು. ಬೆಳೆಯುತ್ತಿರುವ ಮಕ್ಕಳು ಸಾಮಾಜೀಕರಣ ಹೊಂದುವ ದಿಸೆಯಲ್ಲಿ ಸೂಕ್ತವಾದ ವರ್ತನಾ ವಿನ್ಯಾಸಗಳ ವಿಕಾಸಕ್ಕೆ ಮಾರ್ಗದರ್ಶನ ನೀಡಬೇಕಾಗುತ್ತದೆ. ಮಕ್ಕಳ ಬೆಳವಣಿಗೆಗೆ ಸೂಕ್ತವಾದ ಪೌಷ್ಠಿಕಾಂಶಗಳನ್ನು ಒದಗಿಸಿ ಅವರ ಆರೋಗ್ಯ ಸಂರಕ್ಷಣೆ ಮಾಡುವುದರ ಜೊತೆಗೆ ದೈಹಿಕ ಸದೃಢತೆಯನ್ನು ಹೆಚ್ಚಿಸಲು ಮತ್ತು ದೈಹಿಕ ವಿಕಾಸಕ್ಕೆ ಅಗತ್ಯವಾದ ಚಟುವಟಿಕೆಗಳನ್ನು ನೀಡಬೇಕಾಗುತ್ತದೆ.

ಬಾಲ್ಯಾವಸ್ಥೆಯಲ್ಲಿ ಮಕ್ಕಳು ಓದು ಬರಹಕ್ಕಿಂತ ಹೆಚ್ಚಾಗಿ ಆಟಗಳು ಮತ್ತು ಇನ್ನಿತರ ಸೃಜನಾತ್ಮಕ ಚಟುವಟಿಕೆಗಳಿಗೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ. ಹೆಚ್ಚು ಕಾಲವನ್ನು ಆಟದಲ್ಲೇ ಕಳೆಯುತ್ತಾರೆ. ಮಗುವಿನ ಸರ್ವತೋಮುಖವಾದ ಬೆಳವಣಿಗೆಯೇ ಶಿಕ್ಷಣದ ಉದ್ದೇಶವಾಗಿರುವುದರಿಂದ ಈ ಹಂತದ ಎಲ್ಲಾ ಮನೋವೈಜ್ಞಾನಿಕ ವಿಚಾರಗಳನ್ನು ಅರಿತುಕೊಂಡು ಮಕ್ಕಳ ಆಸಕ್ತಿಗನುಗುಣವಾಗಿ ದೈಹಿಕ, ಬೌದ್ಧಿಕ, ಸಾಮಾಜಿಕ-ಸಂವೇಗಾತ್ಮಕ, ಸೃಜನಾತ್ಮಕ ಬೆಳವಣಿಗೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕಾಗುತ್ತದೆ.

ಇಂದಿನ ದಿನಗಳಲ್ಲಿ ಶಾಲೆಯಲ್ಲಿ ಕಲಿಯುವುದೆಂದರೆ ಕೇವಲ ಓದು, ಬರಹ ಮತ್ತು ಲೆಕ್ಕಾಚಾರ ಮಾತ್ರವಲ್ಲ. ಮಗುವಿನ ಮಾನಸಿಕ ಬೆಳವಣಿಗೆಯ ಜೊತೆಗೆ ದೈಹಿಕ ಬೆಳವಣಿಗೆಗೂ ಮಹತ್ವ ಕೊಡಬೇಕಾಗಿದೆ. ಆದ್ದರಿಂದ ಮಕ್ಕಳ ಪಠ್ಯಕ್ರಮದಲ್ಲಿ ಪಠ್ಯ ವಿಷಯಗಳ ಜೊತೆಗೆ ವಿವಿಧ ಚಟುವಟಿಕೆಗಳನ್ನು, ಜೊತೆಗೆ ಆಟಗಳನ್ನು ಸೇರಿಸುವುದು ಅವಶ್ಯವಾಗಿದೆ.

''ಆಟದ ಮೂಲಕ ಕಲಿಕೆ-ಮಕ್ಕಳಿಗೆ ತುಂಬುವುದು ಶಕ್ತಿ''.
ಗಿಣಿ ಪಾಠದ ಕಲಿಕೆ- ಮಕ್ಕಳಿಗೆ ಉಳಿಸುವುದು ನಿರಾಸಕ್ತಿ''.

ಓಡುವುದು, ನೆಗೆಯುವುದು ಮತ್ತು ಕುಣಿದು ಕುಪ್ಪಳಿಸುವುದು ಬಾಲ್ಯಾವಸ್ಥೆಯ ಮಕ್ಕಳ ಪ್ರವೃತ್ತಿ. ''ಆಟವಾಡುವ ಪ್ರವೃತ್ತಿಯು ಮಕ್ಕಳ ಮೂಲಭೂತ ಪ್ರವೃತ್ತಿಯಾಗಿದೆ, ಹಕ್ಕು ಆಗಿದೆ. ಮಕ್ಕಳು ಯಾವುದೇ ಸಾಮಾಜಿಕ ಅಥವಾ ಆರ್ಥಿಕ ಪರಿಸ್ಥಿತಿಯವರಾಗಿರಬಹುದು, ಮಕ್ಕಳು ಆಟವಾಡುವುದನ್ನು ಪೋಷಿಸುವುದು ರೋಗ ನಿವಾರಕ ಔಷಧಿಯ ಭಾಗವಿದ್ದಂತೆ''. ಆದ್ದರಿಂದ ಮಕ್ಕಳಿಗೆ ಆಟ-ಚಟುವಟಿಕೆಗಳ ಅಗತ್ಯತೆ ಇರುತ್ತದೆ. ಆಟಗಳು ಮಕ್ಕಳ ಜೀವನದ ಅವಿಭಾಜ್ಯ ಅಂಗವಿದ್ದಂತೆ. ಅಂದರೆ ಆಟವಾಡದ ಮಕ್ಕಳು ಬಾಲ್ಯದ ಅತೀ ಸುಮಧುರ ಕ್ಷಣಗಳನ್ನು ಕಳೆದುಕೊಂಡಂತೆ. ಆಟಗಳು ಸಮಾಜದ ಪ್ರತಿರೂಪವಾಗಿರುತ್ತವೆ. ಸಮಾಜದ ಮೂಲಭೂತ ಮೌಲ್ಯಗಳನ್ನು ಮಕ್ಕಳಿಗೆ ಕಲಿಸುತ್ತದೆ. ಮಕ್ಕಳ ಶೈಕ್ಷಣಿಕ ಉನ್ನತೀಕರಣದ ಮೇಲೂ ಪ್ರಬಲವಾದ ಪ್ರಭಾವವನ್ನು ಬೀರುತ್ತದೆ. ಆಟಗಳು ಮಕ್ಕಳಿಗೆ ಸರಳ ತಾಂತ್ರಿಕ ಜ್ಞಾನವನ್ನು ಪಡೆಯಲು ಸಹಾಯ ಮಾಡುತ್ತದೆ.

ಆಟಗಳು ವಯಸ್ಕ ಜೀವನದಲ್ಲಿ ಉಪಯೋಗಿಸಬೇಕಾದ ಕೌಶಲಗಳ, ಮೌಲ್ಯಗಳ ಹಾಗೂ ನಿರ್ವಹಿಸಬೇಕಾದ ಪಾತ್ರ ಜ್ಞಾನವನ್ನು ಪಡೆಯಲು ಸಹಕರಿಸುತ್ತವೆ. ಬಾಲ್ಯದಲ್ಲಿ ಮಕ್ಕಳಿಗೆ ಸೂಕ್ತವಾದ ಆಟದ ಪರಿಸರವನ್ನು ಒದಗಿಸುವುದರ ಮೂಲಕ ಬೌದ್ಧಿಕ ವಿಕಾಸವನ್ನು ಚುರುಕುಗೊಳಿಸಬಹುದು.

ಸಿಸ್ ಮನೋವಿಜ್ಞಾನಿ ಜೀನ್ ಪ್ಹಿಯಾಜೆಯವರ ಪ್ರಕಾರ ಬಾಲ್ಯಾವಸ್ಥೆ ಹಂತದಲ್ಲಿ ಮಕ್ಕಳ ಬುದ್ಧಿಶಕ್ತಿ ಮತ್ತು ಸಂವೇದನೆಗಳ ವಿಕಾಸವು ಆಟ ಮತ್ತು ಚಟುವಟಿಕೆಗಳ ಮೂಲಕವೇ ಆಗುವುದರಿಂದ ಈ ಹಂತದಲ್ಲಿನ ಮಕ್ಕಳಿಗೆ ಶಿಕ್ಷಣವನ್ನು ಆಟ ಮತ್ತು ಚಟುವಟಿಕೆಗಳ ಮೂಲಕ ನೀಡಬೇಕೆಂದು ತಿಳಿಸಿ ದ್ದಾರೆ. ಪಿಯ್ಹಾಜೆರವರ ಪ್ರಕಾರ ಬಾಲ್ಯದಲ್ಲಿ ವಸ್ತುಗಳೊಂದಿಗೆ ಒಡನಾಡಲು ಮಕ್ಕಳನ್ನು ಬಿಡಬೇಕು. ಅಹಂ ಅನ್ನು ಕಡಿಮೆ ಮಾಡಲು ಮಕ್ಕಳನ್ನು ಸಾಮಾಜಿಕ ಸಂಪರ್ಕಕ್ಕೆ ಒಳಪಡಿಸಬೇಕು. ಕ್ರಿಯೆ ಅಥವಾ ವಸ್ತುಗಳನ್ನು ಅನುಕ್ರಮದಲ್ಲಿ ಜೋಡಿಸುವ ಅವಕಾಶ ಕಲ್ಪಿಸಬೇಕು. ದೂರ, ಬಣ್ಣ, ಗಾತ್ರ, ಆಕಾರ ಇತ್ಯಾದಿ ಪರಿಕಲ್ಪನೆಗಳ ವಿಕಾಸಕ್ಕಾಗಿ ಚಿತ್ರ ಬಿಡಿಸಲು ಹೇಳಬೇಕು. ಚಲನೆಯನ್ನು ಅರ್ಥ ಮಾಡಿಕೊಳ್ಳಲು ಅನುಕೂಲವಾಗುವಂತಹ ಆಟ ಮತ್ತು ಚಟುವಟಿಕೆಗಳನ್ನು ಏರ್ಪಡಿಸಬೇಕು. ಮಕ್ಕಳು ತೀರ್ಮಾನಗಳನ್ನು ತೆಗೆದುಕೊಂಡಾಗ ಅವುಗಳನ್ನು ಸಮರ್ಥಿಸಿಕೊಳ್ಳಲು ಹೇಳಬೇಕು.

ಡಾ. ಸಿ.ಬಿ. ವಿಕ್ರಮ್
ಸಹಾಯಕ ಪ್ರಾಧ್ಯಾಪಕರು
ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ, ಸಕಲೇಶಪುರ.





"A Sound Mind in a Sound Body".


ಮೇಲಿನ ನಾಣ್ಣುಡಿಯಂತೆ ಸದೃಢ ದೇಹದಲ್ಲಿ ಯಾವಾಗಲೂ ಸದೃಢ ಮನಸ್ಸಿರುತ್ತದೆ. ಆಟದ ಸಂಬಂಧವಾದ ಚಟುವಟಿಕೆಗಳಲ್ಲಿ ಮಕ್ಕಳು ತಮ್ಮ ಸ್ವಾಭಾವಿಕ ಶಕ್ತಿ ಸಾಮರ್ಥ್ಯಗಳನ್ನು ಹೊರಗೆ ಹಾಕುವರು. ಅವರ ವ್ಯಕ್ತಿತ್ವವನ್ನು ಬಹಿರಂಗಪಡಿಸುವರು. ಅವರ ಮೂಲ ಸ್ವಭಾವಗಳು, ಸಹಜ ಪ್ರವೃತ್ತಿಗಳು, ಆಟ-ಚಟುವಟಿಕೆಗಳ ಮೂಲಕ ವಿಕಾಸ ಹೊಂದುವುವು. ಆಧುನಿಕ ಶಿಕಣದ ಮುಖ. ಗುರಿಯೇ ಇದಾಗಿದ್ದು ಮಕಳ ಸಹಜ ಸಾಮರ್ಥ್ಯಗಳನು ಅಡಗಿಸದೆ ಅವುಗಳ ಪೂರ್ಣ ವಿಕಾಸಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಆಟಗಳ ಮೂಲಕ ಈ ಗುರಿ ಸಾಧನೆ ಆಗುವುದು.

ಮಕ್ಕಳ ಜೀವನ ಕ್ರಮವನ್ನು ಪರಿಶೀಲಿಸಿದರೆ ಅವರ ಚಟುವಟಿಕೆಗಳಲ್ಲಿ ಬಹು ಭಾಗವು ಆಟದಿಂದ ಕೂಡಿರುತ್ತದೆ. ಎಲ್ಲಾ ಚಟುವಟಿಕೆಗಳು ಸಹ ಆಟದ ಮನೋಭಾವದಿಂದ ಕೂಡಿರುತ್ತದೆ. ಅಂದರೆ ಮಕ್ಕಳ ಜೀವನ ಕ್ರಮಕ್ಕೆ ಆಟವು ಹಿನ್ನೆಲೆಯಾಗಿದೆ. ಆಟಗಳಲ್ಲಿ ಮಕ್ಕಳಿಗೆ ಹೆಚ್ಚು ಉತ್ಸಾಹ ಕಂಡುಬರುತ್ತದೆ ಮತ್ತು ಅವರ ಮನಸ್ಸನ್ನು ಹೊಸ ವಿಷಯಗಳನ್ನು ತಿಳಿಯಲು ಸಿದ್ಧಗೊಳಿಸುತ್ತದೆ. ಈ ಸಿದ್ಧತೆಯ ಪರಿಣಾಮವು ಉತ್ತಮ ಕಲಿಯುವಿಕೆಯಲ್ಲಿ ಕೊನೆಗೊಳ್ಳುತ್ತದೆ. ಕಲಿಯುವಿಕೆಗೆ ಮತ್ತು ಅದರ ಪ್ರಗತಿಗೆ ಈ ರೀತಿಯಾದ ಸಿದ್ಧತೆ ಅವಶ್ಯಕವಾಗಿರುತ್ತದೆ. ಈ ಆಟದ ಮನೋಭಾವದ ಜೊತೆಗೆ ಮಕ್ಕಳ ಅವಧಾನವು (Attention) ಕೇಂದ್ರೀಕೃತವಾಗುತ್ತದೆ. ಉತ್ಸಾಹ, ಆಸಕ್ತಿಗಳು ಹೆಚ್ಚಾಗಿರುವಾಗ ಅವಧಾನವನ್ನು ಕೇಂದ್ರೀಕರಿಸುವುದು ಸುಲಭ. ಆದ ಕಾರಣ ಆಟದ ಮನೋಭಾವದಿಂದ ಕಲಿಯುವ ಪಾಠದಲ್ಲಿ ಹೆಚ್ಚಾಗಿ ಆಸಕ್ತಿ ಏರ್ಪಡುತ್ತದೆ. ಆಟದ ಮನೋಭಾವ ಇರುವಾಗ ಕಠಿಣವಾದ ವಿಷಯಗಳು ಸುಲಭವಾಗಿಯೂ, ಸರಳವಾಗಿಯೂ ಅರ್ಥವಾಗುತ್ತದೆ. ಆಟದ ಮನೋಭಾವವಿರುವ ವ್ಯಕ್ತಿಗಳು ಕಷ್ಟದ ಸಂದರ್ಭಗಳನ್ನು ಸುಲಭವಾಗಿ ಎದುರಿಸಬಹುದು.

ಒಟ್ಟಾರೆಯಾಗಿ ಹೇಳುವುದಾದರೆ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಆಟದ ಅವಶ್ಯಕತೆ ಅತ್ಯಮೂಲ್ಯವಾಗಿದೆ. ಆಟದ ಪ್ರಭಾವ ಮಗುವಿನ ವಿವಿಧ ವಿಕಾಸಗಳ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ. ಈ ಉದ್ದೇಶದಿಂದಲೇ ಶಾಲೆಗಳಲ್ಲಿ ಪಾಠವನ್ನು ಆಟ ಮತ್ತು ಚಟುವಟಿಕೆಗಳ ಮೂಲಕ ಕಲಿಸುವುದು. ನೂತನ ವಿದ್ಯಾಭ್ಯಾಸ ಕ್ರಮದ ಒಂದು ವೈಶಿಷ್ಟ್ಯ (Learning through Playing or through Activities). ಶಾಲೆಯು ಮಕ್ಕಳಲ್ಲಿ ಸಂತೋಷವನ್ನುಂಟು ಮಾಡಬೇಕು. ಈ ಉದ್ದೇಶದಿಂದಲೇ ಶಾಲೆಗಳಲ್ಲಿ ಆಟದ ಕ್ರಮದಲ್ಲಿ ಗಣಿತ, ಭಾಷೆ ಮುಂತಾದ ಪಾಠಗಳನ್ನು ಕಲಿಸಲಾಗುತ್ತಿದೆ.

Institute of Education, Sakleshpura, Hassan Dist.

PRINCIPAL
J.S.S. Institute of Education
P.B. 26, SAKALESHPUR-573 13
Hassan Dist.



# ಶಿಕ್ಷಣದಲ್ಲಿ ಆಟದ ಮಹತ್ವ

ಆಟವೆಂದರೆ ನಾವು ನೀವು ಮತ್ತು ಜನಸಾಮಾನ್ಯರು ತಿಳಿದಂತೆ ಕೇವಲ ಮನರಂಜನೆ ಮಾತ್ರವಲ್ಲ. ಅದೊಂದು ದೈಹಿಕ ಚಟುವಟಿಕೆಯೊಂದಿಗೆ ಜೋಡಿಸುವ ಮಾನಸಿಕ ಚಟುವಟಿಕೆ. ಈ ಚಟುವಟಿಕೆಯಲ್ಲಿ ಮಕ್ಕಳು ಪ್ರಯೋಗಗಳ ಮೂಲಕ ಏನನ್ನಾದರೂ ಆಟವಾಡುತ್ತ ಯೋಚಿಸಿ ಅನುಭವಗಳನ್ನು ಪಡೆಯುವರು. ಆದ್ದರಿಂದ ಆಟ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಹಾಗೂ ಅವರ ವ್ಯಕಿತ್ವ ವಿಕಸನದಲ್ಲಿ ಪ್ರಮುಖ ಪಾತ್ರ ವನ್ನು ವಹಿಸುತ್ತದೆ.

ಹದಿನೆಂಟನೇ ಶತಮಾನದಿಂದೀಚೆಗೆ ಮನಃಶಾಸ್ತ್ರವನ್ನು ಶಿಕ್ಷಣಕ್ಕೆ ಅನ್ವಯಿಸಿದಾಗ ಪಠ್ಯ ವಿಷಯಗಳಷ್ಟೇ ಪಠ್ಯೇತರ ವಿಷಯಗಳು ಅವಶ್ಯವಾಗಿದೆ ಎಂದು ತಿಳಿಯಲಾಯಿತು. ''ಮಾಡುವ ಮೂಲಕ ಕಲಿ'', ''ಚಟುವಟಿಕೆಯ ಮೂಲಕ ಕಲಿ'' ಎಂಬ ತತ್ವಗಳನ್ನು ರೂಪಿಸಿದ ಮೇಲೆ ಆಟ ಮತ್ತಿತರ ಚಟುವಟಿಕೆಗಳಿಗೆ ಮಹತ್ವವನ್ನು ಕೊಡಲಾಯಿತು.

ವಿಲಿಯಮ್ಸ್ ಮ್ಯಾಗ್ಡೂಗಲ್‌ರವರ ಪ್ರಕಾರ ಮನುಷ್ಯನು ಸಹಜ ಪ್ರವೃತ್ತಿ ಮತ್ತು ಸ್ವಾಭಾವಿಕ ಒಲವುಗಳನ್ನು ಹೊಂದಿರುತ್ತಾನೆ. ಅವುಗಳ ಮೂಲಕ ಬೆಳವಣಿಗೆಯು ಸ್ವಾಭಾವಿಕವಾಗಿ ನಡೆಯುತ್ತದೆ. ಅದನ್ನೇ ಆಟ ಎಂದು ಕರೆಯಬಹುದು. ಆದ್ದರಿಂದ ಆಟವು ಒಂದು ಸ್ವಾಭಾವಿಕ ಒಲವು, ಒಂದು ರಚನಾತ್ಮಕ, ಕ್ರಿಯಾತ್ಮಕ, ಸ್ವತಂತ್ರ, ಉತ್ಸಾಹದಾಯಕ, ಆನಂದದಾಯಕ ಕ್ರಿಯೆಯಾಗಿರುತ್ತದೆ. ಆಟವು ಕೆಲಸಕ್ಕಿಂತ ಭಿನ್ನವಾಗಿದೆ. ಆಟವು ಸ್ವಾಭಾವಿಕವಾಗಿದ್ದು, ಒಂದು ನಿರ್ದಿಷ್ಟ ಗುರಿಯನ್ನು ಹೊಂದಿರುತ್ತದೆ. ಆಟಕ್ಕೆ ನಿಯಮಗಳಿವೆ. ಆ ನಿಯಮಗಳ ಪ್ರಕಾರ ಆಟವಾಡುವುದರಿಂದ ದೇಹದಲ್ಲಿ ಹೊಸ ಚೈತನ್ಯ ಮೂಡುತ್ತದೆ ಮತ್ತು ರಕ್ತ ಶುದ್ಧಿಯಾಗುತ್ತದೆ. ಇದರಿಂದ ವ್ಯಕ್ತಿ ಸದಾ ಹಸನ್ಮುಖಿಯಾಗಿದ್ದು, ಲವಲವಿಕೆಯಿಂದ ಕೆಲಸ ಮಾಡುವನು. ಆದರೆ ಕೆಲಸದಿಂದ ಆಯಾಸ ಉಂಟಾಗುತ್ತದೆ. ದೇಹದಲ್ಲಿ ನಿರುಪಯುಕ್ತ ವಿಷಕಾರಕ ಅಂಶಗಳು (ಟಾಕ್ಸಿನ್‌ಗಳು) ಉತ್ಪತ್ತಿಯಾಗಿ ಚೈತನ್ಯಹೀನನನ್ನಾಗಿ ಮಾಡುತ್ತದೆ.

''ಆಟವು ಅನುವಂಶೀಯತೆಯ ಪವಿತ್ರವಾದ ಪ್ರಕಟಣೆ'' – ಸ್ಟೇನ್ಲಿ ಹಾಲ್.

ಮಕ್ಕಳು ಆಟಗಳನ್ನು ಆಡುವುದರಿಂದ ಹಲವಾರು ಪ್ರಯೋಜನಗಳಿವೆ. ಮಕ್ಕಳ ಬೆಳವಣಿಗೆಯಲ್ಲಿ ಆಟಗಳ ಪಾತ್ರ ಬಹು ಮುಖ್ಯವಾಗಿದೆ. ಮಕ್ಕಳು ಆಟಗಳನ್ನು ಆಡುವುದರಿಂದ ಆರೋಗ್ಯವು ಉತ್ತಮವಾಗಿರುತ್ತದೆ ಮತ್ತು ದೇಹ ಸದೃಢವಾಗಿರುತ್ತದೆ. ಸಣ್ಣ ಸ್ನಾಯುಗಳು ಮತ್ತು ದೊಡ್ಡ ಸ್ನಾಯುಗಳು ಬೆಳವಣಿಗೆಯಾಗುತ್ತವೆ. ರೋಗ ಪ್ರತಿಬಂಧಕ ಶಕ್ತಿಯನ್ನು ಪಡೆಯುವರು. ಮಕ್ಕಳು ಪರಿಸರಕ್ಕೆ ಹೊಂದಿಕೊಳ್ಳುವ ಶಕ್ತಿಯನ್ನು ಪಡೆಯುವುದರೊಂದಿಗೆ ಪಂಚೇಂದ್ರಿಯಗಳು ಸರಿಯಾಗಿ ಕೆಲಸ ಮಾಡುತ್ತದೆ. ಬುದ್ಧಿಶಕ್ತಿ, ರಚನಾತ್ಮಕ ಕಲ್ಪನೆ, ಸೃಜನಶೀಲತೆ ಮತ್ತು ಭಾಷೆಯ ತೀವ್ರ ಬೆಳವಣಿಗೆಯಾಗುವುದು. ಮಕ್ಕಳಲ್ಲಿ ಸಾಮಾಜಿಕ ಬೆಳವಣಿಗೆ ಹೆಚ್ಚಾಗುತ್ತದೆ. ಮಾಡುವ ಕೆಲಸದಲ್ಲಿ ಆಸಕ್ತಿ ಹುಟ್ಟುತ್ತದೆ, ಧೈರ್ಯವಂತರಾಗುತ್ತಾರೆ. ಮಕ್ಕಳಲ್ಲಿ ವಿಧೇಯತೆ, ನಾಯಕತ್ವ, ಸಹಬಾಳ್ವೆ ಮತ್ತು ಮುಂತಾದ ಉತ್ತಮ ಗುಣಗಳು ಬೆಳೆಯುತ್ತವೆ.

ಮಕ್ಕಳು ಆಡುವ ಆಟದ ಗುಣಲಕ್ಷಣಗಳು ಸಾಮಾನ್ಯವಾಗಿ ತಾರುಣ್ಯಾವಸ್ಥೆಯ ಆಟದ ಗುಣಲಕ್ಷಣಗಳಿಂತ ಭಿನ್ನವಾಗಿರುತ್ತದೆ. ಈ ಗುಣಲಕ್ಷಣಗಳು ಒಂದು ಮಗುವಿನಿಂದ ಮತ್ತೊಂದು ಮಗುವಿಗೆ ಭಿನ್ನವಾಗಿರುತ್ತದೆ. ಅವುಗಳು ಯಾವುವೆಂದರೆ ಮಕ್ಕಳು ಆಡುವ ಆಟಗಳು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುತ್ತದೆ. ಚಿಕ್ಕ ಮಕ್ಕಳು ತಾವು ಆಡುವ ಆಟಗಳನ್ನು ದೊಡ್ಡ ಮಕ್ಕಳಿಂದ ಅನುಕರಣೆ ಮಾಡುತ್ತಾರೆ. ಆಟಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆಗೊಳ್ಳುತ್ತದೆ. ಆದ್ದರಿಂದ. ಪ್ರತಿಯೊಂದು ಆಟವು ಸಂಸ್ಕೃತಿಯ ಪ್ರಭಾವಕ್ಕೆ ಒಳಪಡುತ್ತದೆ.

ಆಟಗಳು ನಿರ್ದಿಷ್ಟ ವಯೋಮಾನದ ಬದಲಾವಣೆಗಳನ್ನು ಅವಲಂಬಿಸುತ್ತದೆ. ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬರುವವರೆಗೆ ಮಕ್ಕಳ ಕೆಲವು ಆಟಗಳು ವಿವಿಧ ವಯಸ್ಸುಗಳಲ್ಲಿ ಪ್ರಿಯವಾಗಿರುತ್ತದೆ ಮತ್ತು ಬದಲಾಗುತ್ತದೆ. ಮಕ್ಕಳು ಬೆಳೆದಂತೆಲ್ಲಾ ಅವರು ಆಡುವ ಆಟಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತದೆ.



ಆಟಗಳು ಮಕ್ಕಳಲ್ಲಿರುವ ಅಹಂ–ಕೇಂದ್ರಿತ ಗುಣಗಳನ್ನು ಹೋಗಲಾಡಿಸಿ ಅವರಲ್ಲಿ ಸಾಮಾಜಿಕ ಸಂಬಂಧಗಳನ್ನು ಮತ್ತು ಸಮಾಜಪರ ವರ್ತನೆಗಳನ್ನು ಹೆಚ್ಚಿಸುತ್ತವೆ. ಮಕ್ಕಳು ಬೆಳೆದಂತೆಲ್ಲಾ ಅವರ ಆಟದ ಜೊತೆಗಾರರ ಸಂಖ್ಯೆ ಕಡಿಮೆಯಾಗುತ್ತದೆ ಮತ್ತು ಆಯ್ಕೆ ಸೀಮಿತವಾಗಿರುತ್ತದೆ. ಮಕ್ಕಳು ಬೆಳೆದಂತೆಲ್ಲಾ ಅವರಲ್ಲಿ ಗಂಡು ಹೆಣ್ಣಿನ ಪರಿಕಲ್ಪನೆ ಉಂಟಾಗಿ ಆಡುವ ಆಟಗಳು ಬೇರೆ ಬೇರೆಯಾಗುತ್ತದೆ. ಅನೌಪಚಾರಿಕತೆಯಿಂದ ಔಪಚಾರಿಕತೆಯ ಕಡೆಗೆ ಸಾಗುತ್ತದೆ. ಅವರು ಆಡುವ ಆಟಗಳಲ್ಲಿ ದೈಹಿಕ ಕ್ರಿಯೆಯು ಕ್ರಮೇಣ ಕಡಿಮೆಯಾಗುತ್ತದೆ. ಮಕ್ಕಳು ಆರಿಸಿಕೊಳ್ಳುವ ಆಟಗಳು ಅವರ ಸ್ವಭಾವ ಹಾಗೂ ಹೊಂದಾಣಿಕೆಗೆ ತಕ್ಕಂತಿರುತ್ತದೆ ಮತ್ತು ವಿವಿಧ ಹಂತಗಳಲ್ಲಿ ಅವರು ಆಡುವ ಆಟಗಳು ಅನೇಕ ಮಾರ್ಪಾಡುಗಳನ್ನು ಹೊಂದಿರುತ್ತದೆ.

**ಮಕ್ಕಳ ಆಟಗಳಲ್ಲಿ ಈ ಕೆಳಗಿನ ನಾಲ್ಕು ಹಂತಗಳನ್ನು ಗುರುತಿಸಬಹುದು.**

**ಒಳಹೊಕ್ಕು ಪರೀಕ್ಷಿಸುವ ಹಂತ :** ಮಕ್ಕಳು ಮೂರು ತಿಂಗಳು ತುಂಬುವವರೆಗೂ ಅವರ ಆಟಗಳು ವ್ಯಕ್ತಿಗಳನ್ನು ಮತ್ತು ವಸ್ತುಗಳನ್ನು ನೋಡುವಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಕ್ರಮೇಣ ಮಕ್ಕಳು ಬೆಳೆದಂತೆಲ್ಲಾ ತಮ್ಮ ಮುಂದಿರುವ ವಸ್ತುಗಳನ್ನು ಮುಟ್ಟುವ ಮತ್ತು ತಮ್ಮತ್ತ ಸೆಳೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತವೆ. ಮಕ್ಕಳು ವಸ್ತುಗಳನ್ನು ತಮ್ಮತ್ತ ಸೆಳೆಯಲು ಮತ್ತು ಅವುಗಳನ್ನು ಹಿಡಿದುಕೊಳ್ಳಲು ಅಂಗಾಂಗಗಳ ನಿಯಂತ್ರಣವನ್ನು ಪಡೆದುಕೊಳ್ಳುತ್ತವೆ. ಈ ಅವಧಿಯಲ್ಲಿ ಮಕ್ಕಳು ಪ್ರತಿಯೊಂದು ವಸ್ತುವನ್ನು ಪರೀಕ್ಷಿಸಲು ತಲುಪಲು ತೆವಳುವುದು, ಅಂಬೆಗಾಲಿಡುವುದು ಮತ್ತು ನಡೆದಾಡುವುದನ್ನು ಕಲಿಯುತ್ತವೆ.

**ಆಟಿಕೆಗಳ ಹಂತ :** ಈ ಹಂತದಲ್ಲಿ ಮಕ್ಕಳು ತಮ್ಮ ಆಟಿಕೆಗಳನ್ನು ಗುರುತಿಸುವುದನ್ನು ಮತ್ತು ಪರೀಕ್ಷಿಸುವುದನ್ನು ಕಲಿಯುತ್ತಾರೆ. 2 ರಿಂದ 3 ವರ್ಷಗಳ ಅವಧಿಯಲ್ಲಿ ಮಕ್ಕಳು ತಾವು ಆಡುವ ಆಟಿಕೆಗಳಿಗೆ ಜೀವವಿದೆ ಎಂದು, ಅವು ಮಾತನಾಡಬಲ್ಲವು ಎಂದು ಭಾವಿಸಿರುತ್ತಾರೆ. ಕ್ರಮೇಣ ಅದರ ಬುದ್ಧಿ ಬೆಳೆದಂತೆಲ್ಲಾ ಅವು ನಿರ್ಜೀವ ವಸ್ತುಗಳೆಂದು ಅರಿಯುತ್ತಾರೆ. ಮಕ್ಕಳು ಬೆಳೆದಂತೆಲ್ಲಾ ಆಟಿಕೆಗಳೊಂದಿಗೆ ಆಡುವುದನ್ನು ನಿಲ್ಲಿಸಿ ಇತರ ಮಕ್ಕಳೊಂದಿಗೆ ಆಡುವುದನ್ನು ಕಲಿಯುತ್ತಾರೆ.

**ಆಟಗಳ ಹಂತ :** ಮಕ್ಕಳು ಶಾಲೆಗೆ ಸೇರಿದ ನಂತರದ ದಿನಗಳಲ್ಲಿ ಆಟಗಳ ಮೇಲೆ ಅವರ ಆಸಕ್ತಿ ಬಹಳ ಹೆಚ್ಚಾಗುತ್ತದೆ. ಮೊದಲು ಒಂಟಿಯಾಗಿದ್ದ ಸಂದರ್ಭದಲ್ಲಿ ಆಟಿಕೆಯನ್ನು ಬಳಸುತ್ತಿದ್ದವರು ಕ್ರಮೇಣ ಹೆಚ್ಚು ಹೆಚ್ಚು ಆಟಗಳಲ್ಲಿ, ಕ್ರೀಡೆಗಳಲ್ಲಿ ಹವ್ಯಾಸಗಳಲ್ಲಿ ತೊಡಗುತ್ತಾರೆ.

**ಹಗಲುಗನಸಿನ ಹಂತ :** ಮಕ್ಕಳು ಪೂರ್ವ ತಾರುಣ್ಯಾವಸ್ಥೆಗೆ ತಲುಪಿ ದಂತೆ ಕ್ರಮೇಣ ಆಟಗಳಲ್ಲಿ ತಮ್ಮ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಹೆಚ್ಚು ಆಟದ ಸಮಯವನ್ನು ಹಗಲು ಕನಸು ಕಾಣುವುದಕ್ಕೆ ವ್ಯರ್ಥ ಮಾಡುತ್ತಾರೆ. ಈ ಹಂತದಲ್ಲಿ ಮಕ್ಕಳು ತಮ್ಮನ್ನು ಎಲ್ಲರೂ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆಂದು ಭಾವಿಸಿ ಚಿಂತಾಕ್ರಾಂತರಾಗುತ್ತಾರೆ.

ಅನೇಕ ಅಂಶಗಳು ಆಡುವ ಆಟಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ಆಟಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು. ಆರೋಗ್ಯ ಮಕ್ಕಳ ಆಟಗಳ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶವಾಗಿದೆ. ಆರೋಗ್ಯವಂತ ಮಕ್ಕಳು ಹೆಚ್ಚಾಗಿ ಆಟಗಳಲ್ಲಿ ಕ್ರಿಯಾಶೀಲರಾಗಿರುತ್ತಾರೆ. ಸ್ನಾಯುಗಳ ಉತ್ತಮ ಸಮನ್ವಯತೆ, ಸಂಯೋಜನೆ ಮತ್ತು ಸ್ನಾಯುಗಳ ಬೆಳವಣಿಗೆಯು ಮಕ್ಕಳನ್ನು ಹೆಚ್ಚಾಗಿ ಆಟಗಳ ಕಡೆಗೆ ಆಕರ್ಷಿಸುತ್ತದೆ. ಬುದ್ಧಿಶಕ್ತಿಯು ಮಕ್ಕಳ ಆಟಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಬುದ್ಧಿವಂತ ಮಕ್ಕಳು ಆಟಗಳ ಕಡೆಗೆ ನೈಜವಾಗಿ ಆಕರ್ಷಿಸಲ್ಪಡುತ್ತಾರೆ. ಬೆಳೆದಂತೆಲ್ಲಾ ಹೆಚ್ಚು ಬುದ್ಧಿಶಕ್ತಿ ಬೇಕಾಗುವ ಆಟಗಳ ಕಡೆಗೆ ಹೆಚ್ಚಿನ ಆಸಕ್ತಿ ತೋರುತ್ತಾರೆ. ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳು ಆಟಗಳ ಕಡೆಗೆ ಹೆಚ್ಚಿನ ಆಸಕ್ತಿ ತೋರುತ್ತಾರೆ ಮತ್ತು ವಿವಿಧ ಆಟಗಳಲ್ಲಿ ತೊಡಗುತ್ತಾರೆ. ಆದ್ದರಿಂದ ಲಿಂಗ ಪಾತ್ರದ ಬಗ್ಗೆ ಪೋಷಕರ ನಿರೀಕ್ಷೆ ಆಟದ ಮೇಲೆ ಪ್ರಭಾವ ಬೀರುತ್ತದೆ. ಪರಿಸರವು ಸಹ ಒಂದು ಪ್ರಮುಖ ಅಂಶವಾಗಿದ್ದು ಮಕ್ಕಳ ಆಟಗಳ ಮೇಲೆ ಪ್ರಭಾವವನ್ನು ಬೀರುತ್ತದೆ ಅಭಾವಯುಕ್ತ ಪರಿಸರದಿಂದ ಬಂದ ಮಕ್ಕಳು ಹೆಚ್ಚು ಆಟಗಳನ್ನು ಆಡುವುದಿಲ್ಲ.

ಮಕ್ಕಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಸಹ ಮಕ್ಕಳ ಆಟಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಉತ್ತಮ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಹೊಂದಿರುವ ಮಕ್ಕಳು ಬೆಲೆ ಬಾಳುವ ಆಟೋಪಕರಣಗಳನ್ನು ಬಳಸಿದರೆ, ಬಡ ಮಕ್ಕಳು ಕಡಿಮೆ ಖರ್ಚಿನ ಆಟೋಪಕರಣಗಳನ್ನು ಬಳಸುತ್ತಾರೆ.

ಮಕ್ಕಳ ಆಟಗಳು ಮುಖ್ಯವಾಗಿ ಮಗುವಿಗೆ ಸಿಗುವ ಬಿಡುವಿನ ವೇಳೆಯ ಮೇಲೆ ಅವಲಂಬಿತವಾಗಿರುತ್ತವೆ. ಬಿಡುವು ಹೆಚ್ಚು ಸಿಗುವ ಮಕ್ಕಳು ಆಟದ ಕಡೆಗೆ ಹೆಚ್ಚು ಆಕರ್ಷಿತವಾಗುತ್ತಾರೆ.

ಡಾ. ಸಿ.ಬಿ. ವಿಕ್ರಮ್
ಸಹಾಯಕ ಪ್ರಾಧ್ಯಾಪಕರು
ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ, ಸಕಲೇಶಪುರ.



ಶಾಲಾ ಪ್ರಕ್ರಿಯೆಯಲ್ಲಿ ಆಟ ಮತ್ತು ಚಟುವಟಿಕೆಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಲಾಗಿದೆ. ಇದು ಇಂದಿನ ದಿನಗಳಲ್ಲಿ ವೈಜ್ಞಾನಿಕವೂ ಮತ್ತು ಮನೋ ವೈಜ್ಞಾನಿಕವೂ ಆಗಿದೆ. ಪಠ್ಯೇತರ ಚಟುವಟಿಕೆಗಳು ಮಕ್ಕಳು ತರಗತಿಯಲ್ಲಿ ಓದುತ್ತಿರುವ ವಿಷಯಗಳಿಗೆ ಪೂರಕವಾಗಿರುತ್ತವೆ. ಅಂದರೆ ದೈಹಿಕ ಚಟುವಟಿಕೆಗಳಿಗೆ ಮಾನಸಿಕ ಚಟುವಟಿಕೆಗಳನ್ನು ಮತ್ತು ಮಾನಸಿಕ ಚಟುವಟಿಕೆಗಳಿಗೆ ದೈಹಿಕ ಚಟುವಟಿಕೆಗಳನ್ನು ಮಕ್ಕಳ ಪರಿಪೂರ್ಣ ವ್ಯಕ್ತಿತ್ವ ಬೆಳವಣಿಗೆಗಾಗಿ ಅರ್ಥಪೂರ್ಣವಾಗಿ ಹಾಗೂ ವಿವೇಕಪೂರ್ಣವಾಗಿ ಸಂಯೋಜಿಸಬೇಕಾಗುತ್ತದೆ. ಇದಕ್ಕಿಂತ ಹೆಚ್ಚಾಗಿ ಕಲಿಯುವ ಮಕ್ಕಳನ್ನು ಕಲಿಕೆಗೆ ಹುರುಪುಗೊಳಿಸಿ ಆಸಕ್ತಿ ಮೂಡಿಸಿ, ಕ್ರಿಯಾತ್ಮಕವಾಗಿ ಕಲಿಕೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು.

ಹೀಗಾಗಿ ಆಟ ಮತ್ತು ಚಟುವಟಿಕೆಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು. ಅದರಿಂದ ಮಕ್ಕಳಲ್ಲಿ ಆಸಕ್ತಿ, ಅಭಿರುಚಿ, ಒಲವು, ಸ್ವಯಂ ಪ್ರೇರಣೆ, ಸ್ವಯಂ ಶಿಸ್ತು ಮುಂತಾದುವುಗಳು ಮೂಡಿ ಬರುವುವು. ಅಲ್ಲದೆ ಮಕ್ಕಳು ಚಟುವಟಿಕೆಯಿಂದ ಇದ್ದಾಗ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎಂದು ಹಲವು ಸಂಶೋಧನೆಗಳಿಂದ ತಿಳಿದು ಬಂದಿದೆ. ಆದ್ದರಿಂದ ತರಗತಿಯಲ್ಲಿ ಕೈ ಕಟ್ಟಿಕೊಂಡು ಕುಳಿತು ಶಿಕ್ಷಕರು ಹೇಳುವ ಪಾಠವನ್ನು ನೈಜ ಪರಿಜ್ಞಾನವಿಲ್ಲದೆ ಕಲಿಯುವುದು ಅರ್ಥವಿಲ್ಲದ್ದು. ಕಲಿಯುವ ವಿಷಯಗಳನ್ನು ಅರ್ಥೈಸಿಕೊಂಡು ಸಂತೋಷದಿಂದ ಆಟ ಮತ್ತು ಚಟುವಟಿಕೆಯ ಮೂಲಕ ಕಲಿಯುವುದು ಹೆಚ್ಚು ಸ್ವಾಭಾವಿಕವೆಂದು ತಿಳಿದುಬರುತ್ತದೆ.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist.
J.S.S. Institute of Education, Sakaleshpura, Hassan Dist.